ಕದವ ಮುಚ್ಚಿದಳಿದೆಕೋ ಗಯ್ಯಾಳಿ ಮೂಳಿ

1. **Ref.:** Shri Purandara Dasara Sahitya Part – 6, Sankeerna Sangraha, edited by Shri Betageri Krishna Sharma and Shri Bengeri Huchha Rayaru, page no. 84.
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page no. 156.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page no. 170.
4. **Note:** The lyrics in Ref. 2 are given without highlights. The wordings in Ref. 3 are similar to Ref. 2 except one word which is given in yellow highlights. But the lyrics are different in Ref. 1 and are given separately in green highlights.
5. **Note:** Singer has followed the lyrics as in Ref. 2.

ರಾಗ ಮಧ್ಯಮಾವತಿ ಆದಿ ತಾಳ

ಕದವ ಮುಚ್ಚಿದಳಿದೆಕೋ ಗೈಯಾಳಿ ಮೂಳಿ || ಪ ||

ಕದವ ಮುಚ್ಚಿದಳಿದೆಕೋ ಚಿಲುಕ ಅಲ್ಲಾಡುತ್ತಿದೆ
ಒದಗಿದ್ದ ಪಾಪವು ಹೋದೀತು ಹೊರಗೆಂದು || ಅಪ ||

ಭಾರತ ರಾಮಾಯಣ (ಪುಣ್ಯ ಕಾವ್ಯಂಗಳ) (ಪಂಚರಾತ್ರಾಗಮ)
ಸಾರ ತತ್ವದ ಬಿಂದು ಸೇರೀತು ಒಳಗೆಂದು || 1 ||

ಅಂದುಗೆ ಕಿರುಗೆಜ್ಜೆ ಮುಂಗಾಲಿಲಳವಟ್ಟ
ಧಿಂ ಧಿಮಿ ಧಿಮಿಕೆಂದು ಕುಣಿವ ದಾಸರ ಕಂಡು || 2 ||

ನಂದನ ಕಂದ ಗೋವಿಂದ ಮುಕುಂದನ
ಚಂದವಾದ ಧ್ವನಿ ಹೋದೀತು ಕರ್ಣಕೆಂದು || 3 ||

ಹರಿ ಶರಣರ ಪಾದ ಸರಸಿಜ ಯುಗಳದ
ಪರಮ ಪಾವನವಾದ ರಜವು ಬಿದ್ದೀತೆಂದು ॥ 4 ॥

ಮಂಗಳ ಮೂರುತಿ ಪುರಂದರ ವಿಠಲನ
ತುಂಗ ವಿಕ್ರಮ ಪದದಂಗುಳಿ ಸೋಕೀತೆಂದು ॥ 5 ॥

Note: The lyrics given below are as the book in Ref. 1. They are highlighted in green.

ರಾಗ: ಪೂರ್ವಿ ತಾಳ: ಆದಿ

ಕದವನಿಕ್ಕಿದಳಿದೆಕೊ ಗಯ್ಯಾಳಿ ಮೂಳಿ ॥ ಪ ॥

ಕದವನಿಕ್ಕಿದಳಿದೆಕೊ ಚಿಲುಕವಲ್ಲಾಡುತಿದೆ
ಒಳಗಿದ್ದ ಪಾಪವು ಹೊರಗೆ ಹೋದೀತೆಂದು ॥ ಅಪ ॥

ಭಾರತ – ರಾಮಾಯಣ ಪಂಚರಾತ್ರಾಗಮ
ಸರಾತತ್ವದ ಬಿಂದು ಕಿವಿಗೆ ಬಿದ್ದೀತೆಂದು ॥ ೧ ॥

ಹರಿಯ ಪಾದಾಂಬುಜ ಯುಗಳವ ನೆನೆವ
ಭಕ್ತರ ಪಾದದರಾಜ ಒಳಗೆ ಬಿದ್ದೀತೆಂದು ॥ ೨ ॥

ಮಂಗಳ ಮೂರುತಿ ಪುರಂದರ ವಿಠ್ಠಲನ
ತುಂಗ ವಿಕ್ರಮಪಾದ ಅಂಗಳ ಪೊಕ್ಕೀತೆಂದು ॥ ೩ ॥

ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:

ನಿತ್ಯ ಯಾತ್ರೆಯ ಸಂದರ್ಭದಲ್ಲಿ ಒಂದು ದಿನ ಯಾವಳೋ ಹೆಂಗಸು, ದಾಸರು ಮನೆಯ ಮುಂದೆ ನಿಂತಂತೆಯೇ, ಮನೆಬಾಗಿಲು ಮುಚ್ಚಿಕೊಂಡು ಒಳಗೆ ಹೋದುದು ಇಲ್ಲಿನ ಸಂದರ್ಭ. ಅದನ್ನು ನೋಡಿ ದಾಸರು ನಗೆಯಾಟವಾಡುತ್ತಾರೆ.

ಚಿಲುಕ ಅಲ್ಲಾಡುತಿದೆ – ಆಗಲೇ ಬಾಗಿಲು ಮುಚ್ಚಿದ್ದನ್ನು ತಿಳಿಸುವಂತೆ ಹೊರಗೆ ಅಗುಳಿ ಅಲುಗಾಡುತ್ತಿದೆ.

ಒಳಗಿದ್ದ ಪಾಪವು... – ಮನೆಗೆ ಬಾಗಿಲು ಎರಡು ಪ್ರಯೋಜನಗಳಿಗಾಗಿ; ಒಳಗಿದ್ದವರು ಹೊರಗೆ ಹೋಗಲು, ಹೊರಗಿದ್ದವರು ಒಳಗೆ ಬರಲು. ಪ್ರಾಪಂಚಿಕ ಜನರಿಗೆ ಒಳಗಿರುವುದು ಆಸೆ, ಅಸೂಯೆ ಮೊದಲಾದ ಕೆಟ್ಟ ಸಾಮಗ್ರಿ. ಇವು ಹೊರಗೆ ಹೋಗದಂತೆ ಮನಸ್ಸನ್ನು ಅವುಗಳಲ್ಲೇ ನೆಟ್ಟು ಅವನ್ನು ಬೇರೂರಿಸುತ್ತಾರೆ. ಇದೇ 'ಕದವನ್ನು ಮುಚ್ಚುವುದು.'

ಭಾರತ ರಾಮಾಯಣ... – ಶಾಸ್ತ್ರ ಗ್ರಂಥಗಳಲ್ಲಿರುವ ಪಾರಮಾರ್ಥಿಕ ತತ್ತ್ವದ ಕಡೆ ಜನರ ಮನಸ್ಸು ಹರಿಯುವುದಿಲ್ಲ.

ಅಂದುಗೆ – ಕಾಲುಂಗುರ.

ತುಂಗ ವಿಕ್ರಮ ಪದದ – ವಿಷ್ಣುವಿನ ತ್ರಿವಿಕ್ರಮಾವತಾರದ ನೆನಪು ಇಲ್ಲಿದೆ. ಭೂಮಿ, ಅಂತರಿಕ್ಷ, ವ್ಯೋಮ ಮೂರೂ ಸ್ಥಳಗಳನ್ನು ಆಕ್ರಮಿಸಿಕೊಂಡ ಸಂಗತಿ 'ತ್ರೀಣಿ ಪದಾ ವಿಚಕ್ರಮೇ ವಿಷ್ಣುಃ' ಎಂಬ ವೇದದ ಮಾತಿನಲ್ಲಿ ಇರುವುದನ್ನು ದಾಸರು ಇಲ್ಲಿ 'ತುಂಗ ವಿಕ್ರಮಪದ'ವೆಂದು ಬಣ್ಣಿಸಿದ್ದಾರೆ.

Classification: Keerthane
Ankita: purandara vittala
Location: NA
Category: jeevana darshana, Sankeerna.
Sub-Category: gayyali, bagilu, gejje, govinda, mukunda, sharana, papa, purana, punya, Krishna, Vishnu, mangala, kivi,
Pravachana: NA
Explanation: NA